ಸ್ಫೂರ್ತಿಚೇತನರ ಚಿರ ನೆನಪುಗಳು

ಸ್ವಾಮಿ ಹರ್ಷಾನಂದ

ಜಗತ್ತಿನ ಶ್ರೇಷ್ಠವ್ಯಕ್ತಿಗಳು ದೈವಪ್ರೇರಿತರು; ಸ್ಫೂರ್ತಿಚೇತನರು. ನಾವು ಸಹ ನಮ್ಮ ಜೀವನವನ್ನು ಶ್ರೇಷ್ಠತಮವಾಗಿ ಅಲ್ಲದಿದ್ದರೂ ಭವ್ಯವಾಗಿ ಮಾಡಿಕೊಳ್ಳಲು ಅವರು ನೆನಪಿಸುತ್ತಾರೆ. ಆ ಶ್ರೇಷ್ಠವ್ಯಕ್ತಿಗಳ ಜೀವನದ ನೆನಪುಗಳನ್ನು ಸಂಗ್ರಹಿಸಿ, ಜನರಲ್ಲಿ ಪ್ರಸಾರಮಾಡಿ, ಅದರಿಂದ ಜನರೂ ಸಹ ಸ್ಫೂರ್ತಿಗೊಂಡು ಉದಾತ್ತ ಜೀವನ ನಡೆಸಲು ನೆರವಾಗುವುದು ನಮ್ಮ ಕರ್ತವ್ಯ.



ಸ್ವಾಮಿ ಯತೀಶ್ವರಾನಂದರು ಅಂಥ ಶ್ರೇಷ್ಠವ್ಯಕ್ತಿಗಳಲ್ಲಿ ಒಬ್ಬರು. ಅವರು ಅತಿಸಾಮಾನ್ಯ ವ್ಯಕ್ತಿಗಳೂ ಸಹ ಅಸಾಮಾನ್ಯ ವ್ಯಕ್ತಿಗಳಾಗಲು ಸ್ಫೂರ್ತಿ ನೀಡಿದ ಮಹಾಚೇತನ.

ಅವರೊಡನೆ ನನ್ನ ಒಡನಾಟ ಎಂಟು ವರ್ಷಗಳ ಕಾಲದ್ದು. ಮೊದಲು ವಿದ್ಯಾರ್ಥಿ ಸ್ವಯಂಸೇವಕನಾಗಿ, ನಂತರ ಅವರ ಕೈಕೆಳಗೆ ರಾಮಕೃಷ್ಣಸಂಘದ ಸದಸ್ಯನಾಗಿ. ಇದು ನನ್ನ ಮೇಲೆ ಎಂಥ ಗಾಢ ಪ್ರಭಾವ ಬೀರಿದೆ ಎಂದರೆ, ಅವರನ್ನು ನೆನೆಯದ ದಿನವೇ ಇಲ್ಲದಾಗಿದೆ.

ಅವರನ್ನು ನಾನು ಭೇಟಿಮಾಡಿದ್ದು ೧೯೫೧ನೇ ಇಸವಿಯ ಜನವರಿ ತಿಂಗಳಲ್ಲಿ. ಬೆಂಗಳೂರಿನ ರಾಮಕೃಷ್ಣ ಮಠದಲ್ಲಿಯೇ ಅವರನ್ನು ಕಾಣುವ ಸೌಭಾಗ್ಯ ದೊರಕಿತ್ತು. ಅವರು ಎಂಥ ವಾತ್ಸಲ್ಯಪೂರಿತ ಮೋಹಕ ವ್ಯಕ್ತಿಯೆಂದು ಪ್ರಥಮ ಭೇಟಿಯಲ್ಲಿಯೇ ನನ್ನ ಮನಸ್ಸಿಗೆ ನಾಟಿತು.

ಸ್ವಾಮಿ ತ್ಯಾಗೀಶಾನಂದರು ೧೯೫೧ರಲ್ಲಿ ದೈವಾಧೀನರಾದ ಮೇಲೆ, ಸ್ವಾಮಿ ಯತೀಶ್ವರಾನಂದರು ಬೆಂಗಳೂರಿನ ಬಸವನಗುಡಿ ಆಶ್ರಮದ ಅಧ್ಯಕ್ಷರಾಗಿ ಬರುವರೆಂದು ತಿಳಿದು ನಮ್ಮ ಆನಂದಕ್ಕೆ ಪಾರವೇ ಇರಲಿಲ್ಲ.

ಅವರು ಬಂದ ಮೊದಲ ದಿನದಿಂದಲೇ ನಾನು ಅವರಿಗೆ ಹತ್ತಿರದವನಾದೆ. ನಾನು ರಾಮಕೃಷ್ಣ ಸಂಘವನ್ನು ಸೇರುವ ಇಚ್ಛೆ ವ್ಯಕ್ತಪಡಿಸಿದ್ದೆನಾದ್ದರಿಂದ ತಮ್ಮೊಡನೆ ಸಲಿಗೆಯಿಂದ ಇರಲು ಅವರು ನನಗೆ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಹಾಗೆಯೇ ವಿಶೇಷವಾಗಿ ಮಾರ್ಗದರ್ಶನವನ್ನೂ ಮಾಡುತ್ತಿದ್ದರು. ಆ ಸಮಯದಲ್ಲಿ ಅವರು ನನಗೆ ಹೇಳಿದ್ದರು, "ನಿನಗೆ ಎರಡು ಮಾರ್ಗಗಳು ಗೋಚರಿಸುತ್ತ ಇರುವವರೆಗೆ ಬರಬೇಡ. ನಿನಗೆ ಯಾವಾಗ ಒಂದೇ ಪಥ – ಸಂನ್ಯಾಸಾಶ್ರಮದ ಪಥ – ತೋರುವುದೋ ಆಗ ಮಾತ್ರ ಬಾ."

ನಾನು ಪದವೀಧರನಾದ ಮೇಲೆ, ಕೊಂಚ ಸಮಯದಲ್ಲೇ ಗಂಭೀರ ಖಾಯಿಲೆಗೆ ತುತ್ತಾದೆ. ನಾನು ಗುಣಹೊಂದಿದ ಮೇಲೆ ಸಂಘವನ್ನು ಸೇರುವ ಇಚ್ಛೆಯೊಡನೆ ಅವರನ್ನು ಭೇಟಿಮಾಡಿದೆ. ನನ್ನನ್ನು ಸಂಪೂರ್ಣ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ನಂತರ ಆಶ್ರಮ ಸೇರಲು ಪೂಜ್ಯ ಸ್ವಾಮೀಜಿ ಅನುಮತಿ ಇತ್ತರು. ಆದರೂ ಮುಖ್ಯಕೇಂದ್ರದಿಂದ ವಿಧ್ಯುಕ್ತ ಒಪ್ಪಿಗೆ ಬರಲು ೩೪ ತಿಂಗಳಾಯಿತು! ಇದಕ್ಕೆ ಕಾರಣ ಮರುಕಳಿಸುತ್ತಿದ್ದ ನನ್ನ ಆರೋಗ್ಯದ ಸಮಸ್ಯೆಗಳು. ಕಡೆಗೊಮ್ಮೆ ನನ್ನ ವಿನಂತಿಗೆ ಒಪ್ಪಿಗೆ ದೊರಕಿದಾಗ ಸ್ವಾಮೀಜಿ ಹೇಳಿದರು, "ನಿನ್ನನ್ನು ಸ್ವೀಕರಿಸುವ ಮುನ್ನ ನಾನು ಶ್ರೀರಾಮಕೃಷ್ಣರಿಗೆ ಮೊರೆಯಿಟ್ಟಿದ್ದೆ, ನಿನ್ನನ್ನು ಆಮೂಲಾಗ್ರವಾಗಿ ಪರೀಕ್ಷಿಸುವಂತೆ. ನೀನು ಇಷ್ಟೊಂದು ತೊಂದರೆ ಅನುಭವಿಸಿದ್ದು ಆ ಕಾರಣದಿಂದಾಗಿಯೇ!" ಅನಂತರ ಮಿನುಗುವ ಕಣ್ಣುಗಳಿಂದ ಹೇಳಿದರು, "ನಾನು ನಿನ್ನನ್ನು ಮಠಕ್ಕೆ

ರಾಮಕೃಷ್ಣ ಮಹಾಸಂಘವು ಅನೇಕ ಆಧ್ಯಾತ್ಮಿಕ ದಿಗ್ಗಜರನ್ನು ಸೃಷ್ಟಿಸಿದೆ. ಅಂಥವರಲ್ಲಿ ಒಬ್ಬರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದ ಪೂಜ್ಯ ಸ್ವಾಮಿ ಯತೀಶ್ವರಾನಂದಜಿ ಅವರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಅವರು ನೂರಾರು ಮಂದಿಗೆ ಅಧ್ಯಾತ್ಮ ಮಾರ್ಗದ ಬೆಳಕನ್ನು ತೋರಿದ್ದಾರೆ; ಹಲವಾರು ಸಂನ್ಯಾಸಿಗಳ ಜೀವನದ ದಾರಿದೀಪವಾಗಿದ್ದಾರೆ. ಇಂಥ ಮೇರು ವ್ಯಕ್ತಿತ್ವದ ಹೃದಯಂಗಮ ಸ್ಮರಣೆಯನ್ನು ದಾಖಲಿಸಿರುವ ಪೂಜ್ಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರವೀಣರಾದ ಇವರು ಹಲವಾರು ಗ್ರಂಥಗಳನ್ನು ಬರೆದಿದ್ದಾರೆ.

ಸೇರಿಸಿಕೊಳ್ಳಬಾರದೆಂದಿದ್ದೆ! ಆದರೆ ಗುರುಮಹಾರಾಜರು smuggle ಮಾಡಿ ನಿನ್ನನ್ನು ಒಳಸೇರಿಸಿದರು!"

ನಾನು ಬಸವನಗುಡಿಯ ಆಶ್ರಮದಲ್ಲಿ ನಾಲ್ಕು ವರ್ಷ ಏಳು ತಿಂಗಳಿದ್ದೆ. ಈ ಸಮಯದಲ್ಲಿ ಸ್ವಾಮೀಜಿಗೆ ವೈಯಕ್ತಿಕ ಸೇವೆಯನ್ನು ಸಲ್ಲಿಸಲು ನನಗೆ ಅವಕಾಶಗಳು ದೊರೆತವು. ಈ ಅವಕಾಶಗಳಲ್ಲಿ ಅವರ ಜೊತೆ ಇದ್ದು, ಅವರು ಇತ್ತ ಸಲಹಾರೂಪದ ಉಪದೇಶಗಳು ನನ್ನನ್ನು ಸ್ಫೂರ್ತಿಗೊಳಿಸಿದರೂ, 'ಸೇವೆಯನ್ನು ಸಲ್ಲಿಸುವ ತಪ್ಪು ಕಲ್ಪಿತ ಉತ್ಸಾಹದಲ್ಲಿ' ಅನೇಕ ಬಾರಿ ಅವರನ್ನು ತೊಂದರೆಗೆ ಈಡುಮಾಡಿದ್ದೆ.

ಒಮ್ಮೆ 'ಎಕ್ಸ್-ರೇ' ತೆಗೆದುಕೊಳ್ಳುವುದಕ್ಕಾಗಿ ಎಕ್ಸ್-ರೇ ತೆಗೆಯುವ ಕೇಂದ್ರ ಹತ್ತಿರದಲ್ಲಿಯೇ ಇದೆಯೆಂದು ಹೇಳಿ, ಅವರು ನಾಲ್ಕು ಕಿ.ಮೀ. ನಡೆಯುವಂತೆ ಮಾಡಿದೆ. ಇನ್ನೊಮ್ಮೆ ಅವರಿಗೆ ಸಹಾಯ ಮಾಡುವ ಉತ್ಸಾಹದಲ್ಲಿ ಅವರು ಸಮತೋಲನ ತಪ್ಪಿ ಕೆಳಕ್ಕೆ ಬೀಳುವಂತೆ ಮಾಡಿದೆ. ಈ ಎರಡು ಸಂದರ್ಭಗಳಲ್ಲೂ ಅವರ ಪಾದ ಹಿಡಿದು ಹೃದಯಾಂತರಾಳದಿಂದ ಕ್ಷಮಾಪಣೆ ಕೇಳಿದೆ. ಅವರು "ಹೋಗಲಿ ಬಿಡು, ಅದಕ್ಕಾಗಿ ಯೋಚನೆ ಮಾಡಬೇಡ" ಎಂದಷ್ಟೇ ಹೇಳಿದರು.

ಆಗಾಗ್ಗೆ ಅವರು ನಮಗೆ ಹೇಳುತ್ತಿದ್ದ ವಿಷಯವೆಂದರೆ, "ದೇವಮಾನವನಾಗುವುದಕ್ಕೆ ಮುಂಚೆ ಮೊದಲು ಸಜ್ಜನ ನಾಗು" ಎಂದು. ಸ್ವಾಮೀಜಿಯವರು ಅಡಿಯಿಂದ ಮುಡಿ ಯವರೆಗೂ ಸಜ್ಜನರಾಗಿದ್ದರು.

ಒಮ್ಮೆ ನಾನು ಬೆಳಗ್ಗೆ ಆರು ಗಂಟೆಗೆ ಧ್ಯಾನಕ್ಕೆ ಕುಳಿತಿದ್ದೆ. ಆಗ ಪಕ್ಕದ ಮೊಗಸಾಲೆಯಲ್ಲಿ ಅವರ ಹೆಜ್ಜೆಗಳ ಸಪ್ಪಳ ಕೇಳಿದೆ. ಹಲವು ನಿಮಿಷಗಳಾದ ಮೇಲೆ ಅವರು ಬಾಗಿಲನ್ನು ಮೃದುವಾಗಿ ತಟ್ಟಿದರು. ನಾನು ಬಾಗಿಲು ತೆಗೆದೊಡನೆಯೇ ಅವರು ಹೇಳಿದ ಮೊದಲ ಮಾತುಗಳೆಂದರೆ, "ನಿನ್ನನ್ನು ತೊಂದರೆಪಡಿಸಿದುದಕ್ಕೆ ಕ್ಷಮಿಸು!" ಎಂದು. ನಾವೆಲ್ಲ ಅವರ ಸೇವೆಗೆ ಸದಾ ಸಿದ್ಧರಿದ್ದೇವೆಂದು ನಾನು ನಮ್ರ ನಾಗಿ ಸೂಚಿಸಿದಾಗ ಸ್ವಾಮೀಜಿ, "ಇಲ್ಲ, ಇಲ್ಲ! ನಾವು ಯಾರನ್ನೂ ಅನವಶ್ಯಕವಾಗಿ ತೊಂದರೆಪಡಿಸಬಾರದು" ಎಂದುತ್ತರಿಸಿದರು. ಯಾವ ತುರ್ತುಕೆಲಸಕ್ಕಾಗಿ ಅವರು ಬಾಗಿಲು ತಟ್ಟಿ ನನ್ನನ್ನು ಎಬ್ಬಿಸಿದರೋ ಆ ಕೆಲಸವನ್ನು ನಾನು ಕೂಡಲೇ ಮಾಡಿದೆನೆಂದು ಹೇಳುವ ಆವಶ್ಯಕತೆಯೇನಿಲ್ಲ.

ಭಕ್ತರಲ್ಲಿ ಯಾರಾದರೂ 'ಮಂತ್ರದೀಕ್ಷೆ' ನೀಡಬೇಕೆಂದು ಕೇಳಿದರೆ ಸ್ವಾಮೀಜಿಯವರು ಅವರಿಗೆ ಅವಶ್ಯವಾಗಿ ದೀಕ್ಷೆ ನೀಡುತ್ತಿದ್ದರು. ಸಾಮಾನ್ಯವಾಗಿ ದೀಕ್ಷೆ ಕೊಡುವ ಮುನ್ನ ಒಬ್ಬೊಬ್ಬರನ್ನೇ ಪ್ರತ್ಯೇಕವಾಗಿ ಕರೆದು ಅವರ ಪೂರ್ವೋತ್ತರಗಳನ್ನು ವಿಚಾರಿಸುತ್ತಿದ್ದರು. ಅವರು ದೀಕ್ಷೆ ಕೊಡುವ ಕೊಠಡಿಯನ್ನು ಸಿದ್ಧಗೊಳಿಸುವುದು ನನ್ನ ಪಾಲಿಗೆ ಬಂದ ಭಾಗ್ಯವಾಗಿತ್ತು. ಸ್ವಾಮೀಜಿ ಮೊದಲು ಶ್ರೀರಾಮಕೃಷ್ಣರಿಗೆ ಅರ್ಚನೆ ಮಾಡಿ ನಂತರ ದೀಕ್ಷಾಕ್ರಿಯೆಯಲ್ಲಿ ತೊಡಗುತ್ತಿದ್ದರು. ಸಾಮಾನ್ಯವಾಗಿ ೮-೧೦ ಜನರಿರುವ ಗುಂಪಿಗೆ ಕೆಲವು ಸೂಚನೆಗಳನ್ನು ನೀಡಿ, ನಂತರ ಪ್ರತಿ ಯೊಬ್ಬರಿಗೂ ವೈಯಕ್ತಿಕವಾಗಿ ದೀಕ್ಷೆ ನೀಡುತ್ತಿದ್ದರು.

ದೀಕ್ಷಾ ಸಮಾರಂಭವು ಮುಗಿದ ಮೇಲೆ ನಾನು ವಿನಮ್ರನಾಗಿ ಅವರಿಗೆ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೆ. ಆಗ ಅವರ ಮುಖದಲ್ಲಿ ಅದ್ಭುತವಾದ ದೈವೀಕಳೆಯನ್ನು, ವಿಶೇಷವಾಗಿ ಅವರ ಕಣ್ಣುಗಳಲ್ಲಿ ಆ ಭಾವವು ಪ್ರಕಟ ವಾಗುವುದನ್ನು, ನಾನು ನೋಡುತ್ತಿದ್ದೆ. ಅದಲ್ಲದೆ, ಆ ಭಾವದ ಅನುಭವವೂ ನನಗೆ ಆಗುತ್ತಿತ್ತು. ದೀಕ್ಷಾದಿನದಂದು ದೀಕ್ಷಾಕ್ರಿಯೆಯು ಮುಗಿಯುವವರೆಗೂ ಅವರು ಉಪವಾಸ ವಿರುತ್ತಿದ್ದರು.

ಹಲವಾರು ಚಟುವಟಿಕೆಗಳು, ಕಾರ್ಯಕ್ರಮಗಳಿಂದ ಕೂಡಿರುವ ಒಂದು ಆಶ್ರಮವನ್ನು ನಡೆಸಲು, ಕೊಂಚ ರಜೋಗುಣವು (ಕ್ರಿಯಾಶಕ್ತಿಯ ಭಾವ) ಅವಶ್ಯವೆಂದು ನಮ್ಮ ಭಾವನೆ. ಆ ರಜೋಗುಣವನ್ನು ಬಿಡುವಿಲ್ಲದ ಕಾರ್ಯಗಳಿಂದ, ವಿಶ್ರಾಂತಿರಹಿತ ಚಟುವಟಿಕೆಗಳಿಂದ, ಕೆಲವೊಮ್ಮೆ ಕೋಪತಾಪಗಳಿಂದ, ಬೈಗುಳಗಳಿಂದ ಹೊರಹೊಮ್ಮಿಸಬೇಕಾಗುತ್ತದೆ. ಆದರೆ ಸ್ವಾಮೀಜಿಯವರ ಕಾರ್ಯನಿರ್ವಹಣೆಯಲ್ಲಿ ಇವೆಲ್ಲಕ್ಕೂ ಸ್ಥಾನವೇ ಇರಲಿಲ್ಲ. ಆದರೂ ಆಶ್ರಮದ ಕಾರ್ಯಗಳು ಯಾವ ಏರುಪೇರೂ ಇಲ್ಲದೆ ಸುಗಮವಾಗಿ ನಡೆದುಕೊಂಡು ಹೋಗುತ್ತಿದ್ದವು!

ಇದು ಹೇಗೆ? ಹೇಗೆಂದರೆ ಅವರು ತಮ್ಮ ಸಹಾಯಕರಲ್ಲಿ ಪೂರ್ಣ ವಿಶ್ವಾಸವಿಟ್ಟಿದ್ದರು; ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟು, ಮೃದುವಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಯಾರಾದರೂ ಏನಾದರೂ ತಪ್ಪು ಮಾಡಿದರೆ ಆ ವ್ಯಕ್ತಿ ಯನ್ನು ತಮ್ಮ ಕೊಠಡಿಗೆ ಕರೆಸಿ, ಅವಿವೇಕದಿಂದ ಅವರು ಮಾಡಿದ ತಪ್ಪಿನಿಂದ ಆಗಬಹುದಾದ ದುಷ್ಪರಿಣಾಮಗಳನ್ನು ವಿವರಿಸುತ್ತಿದ್ದರು. ಅದು ಆತನ ಆಧ್ಯಾತ್ಮಿಕ ಜೀವನದಲ್ಲಿ ಹೇಗೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ ಎಂದೂ ತಿಳಿಯಹೇಳುತ್ತಿದ್ದರು.

ಪೂಜ್ಯ ಶಾಸ್ತ್ರಾನಂದಜಿ ಅವರ ಸಹಾಯಕನಾಗಿ ನಾನು ವಿವೇಕಾನಂದ ಬಾಲಕಸಂಘಕ್ಕೆ ಸೇರಿದ ಬಾಲಕರ ದೈನಂದಿನ ಕಾರ್ಯಕ್ರಮಗಳನ್ನು ನೋಡಿಕೊಳ್ಳಬೇಕಾಗಿತ್ತು. ಅಲ್ಲಿನ ಕೆಲವು ಪ್ರೌಢಬಾಲಕರು ಅವಿಧೇಯರಾಗಿದ್ದರು. ಅವರನ್ನು ಹತೋಟಿಯಲ್ಲಿಡಲು ನನಗೆ ಕಷ್ಟವಾಗುತ್ತಿತ್ತು. ಆ ಹುಡುಗರು ಬುದ್ಧಿವಂತರು. ನಿಜವಾದ ಅಧಿಕಾರ ಯಾರ ಬಳಿಯಲ್ಲಿ ಇದೆ ಎಂದು ಅವರಿಗೆ ಗೊತ್ತಿತ್ತು; ಅಂಥವರ ಬಳಿ ಮಾತ್ರ ಬಹು ವಿಧೇಯರಾಗಿ ಸಜ್ಜನರಂತೆ ನಡೆದುಕೊಳ್ಳುತ್ತಿದ್ದರು.

ಆ ಹುಡುಗರ ನಡವಳಿಕೆಗೆ ಬೇಸತ್ತು ನಾನು ಸ್ವಾಮಿ ಯತೀಶ್ವರಾನಂದರಿಗೆ ದೂರಿತ್ತೆ. ಸ್ವಾಮೀಜಿಯವರು ಶಾಸ್ತ್ರಾ

ನಂದರಿಗೆ ಹೇಳಿ, ಅವರು ಈ ಅವಿಧೇಯ ಹುಡುಗರಿಗೆ ಬುದ್ಧಿವಾದ ಹೇಳಬೇಕೆಂದೂ, ಆ ಮೂಲಕ ಆ ಹುಡುಗರು ನನ್ನ ಮಾತನ್ನು ಮನ್ನಿಸುವಂತೆ ಮಾಡಬೇಕೆಂದೂ ನನ್ನ ವಿನಂತಿಯಾಗಿತ್ತು.

ಸ್ವಾಮೀಜಿ ನಾನು ಹೇಳಿದ್ದೆಲ್ಲವನ್ನೂ ತಾಳ್ಮೆಯಿಂದ ಕೇಳಿದರು. ತಮ್ಮ ಮುಖದ ಮೇಲಿದ್ದ ನಸುನಗೆಯನ್ನು ಸಡಿಲ ಮಾಡದೆ ಹೀಗೆ ಹೇಳಿದರು: "ಗೌರವವನ್ನು ಬಲವಂತ ವಾಗಿ ಪಡೆಯಲಾಗುವುದಿಲ್ಲ! ಅದನ್ನು ಗಳಿಸಬೇಕು! ನಿನ್ನ ನಡವಳಿಕೆಯಿಂದ ನೀನು ಆ ಹುಡುಗರ ಶ್ರೇಯಸ್ಸನ್ನು ಬಯಸುತ್ತೀಯೆಂದು ಅವರಿಗೆ ಮನಗಾಣಿಸು. ಆಗ ಎಲ್ಲವೂ ಸರಿಹೋಗುವುದು."

ಇದು ನನ್ನ ಕಣ್ಣನ್ನು ತೆರೆಸಿತು. ನಾನು ನನ್ನ ನಿಲುವನ್ನು ಬದಲಾಯಿಸಿಕೊಂಡೆ. ಬಹು ತಾಳ್ಮೆಯಿಂದ ಕೆಲಸವನ್ನು ನಿರ್ವಹಿಸಿದೆ. ಅದು ನಿರೀಕ್ಷಿತ ಫಲ ನೀಡಿತು.

ಇನ್ನೊಂದು ಸಂದರ್ಭದಲ್ಲಿ ನನ್ನ ಜೀವನದ ಅತ್ಯಂತ ಗಹನವಾದ ಪಾಠವನ್ನು ಕಲಿತೆ. ನನ್ನನ್ನು ಪೂಜಾ ವಿಭಾಗದಿಂದ ಪುಸ್ತಕ ಮಾರಾಟ ಮಳಿಗೆಗೆ ವರ್ಗ ಮಾಡಿದ್ದರು. ವಾರ್ಷಿಕ ಸಮಾರಂಭಗಳು ಹತ್ತಿರದಲ್ಲಿಯೇ ಇದ್ದುದರಿಂದ, ಆ ಸಂದರ್ಭ ದಲ್ಲಿ ನಾನು ಪುಸ್ತಕ ಮಾರಾಟ ಮಳಿಗೆಯನ್ನು ಅದ್ಭುತವಾಗಿ ಅಲಂಕರಿಸಲು ಒಂದು ಯೋಜನೆಯನ್ನು ತಯಾರಿಸಿದ್ದೆ. ನನ್ನ ಯೋಜನೆಯ ವೆಚ್ಚ ೨೫ ರೂಪಾಯಿಗಳು! (ಇದು ಡಿಸೆಂಬರ್ ೧೯೫೪ರಲ್ಲಿ). ನಮ್ಮ ರಾತ್ರಿಯ ತರಗತಿಯಲ್ಲಿ ಈ ವಿಷಯವನ್ನು ಚರ್ಚಿಸಲಾಯಿತು. ಆಶ್ರಮದ ಎಲ್ಲ ಸಹೋದರ ಬಂಧುಗಳು ಇದನ್ನು ಗೇಲಿಮಾಡಿ ತಿರಸ್ಕರಿಸಿದರು. ಇಷ್ಟೊಂದು ಹಣ ವೆಚ್ಚ ಮಾಡಿಯೂ, ಪುಸ್ತಕದ ಮಾರಾಟ ಹೆಚ್ಚಾಗುವುದಿಲ್ಲವೆಂದು ಅಭಿಪ್ರಾಯಪಟ್ಟರು. ನಾನು ಪೆಚ್ಚಾಗಿ ತಲೆಬಾಗಿಸಿದೆ. ಇದನ್ನು ಗಮನಿಸಿದ ಸ್ವಾಮೀಜಿಯವರು ನನಗೆ ಎಷ್ಟು ಹಣ ಬೇಕೆಂದು ಕೇಳಿದರು. "೨೫ ರೂಪಾಯಿಗಳು" ಎಂದು ಹೇಳಿದೆ. ತತ್‌ಕ್ಷಣವೇ ಆ ಹಣವನ್ನು ಅವರು ಮಂಜೂರು ಮಾಡಿದರು.

ನಾನು ಅವರ ಕೊಠಡಿಗೆ ಹೊರಡಲು ಅನುವಾದಾಗ, ಅವರು ಇದ್ದಕ್ಕಿದ್ದ ಹಾಗೆ ನನ್ನ ಕಡೆ ತಿರುಗಿ, ಈ ಮಾತನ್ನು ಒತ್ತಿ ಹೇಳಿದರು: "ಎಲ್ಲಿ ಲೌಕಿಕವಸ್ತುಗಳಿಗೂ ಮತ್ತು ಮಾನವ ಸಂಬಂಧಗಳಿಗೂ ಘರ್ಷಣೆಯಾಗುತ್ತದೆಯೋ, ಅಲ್ಲಿ ಲೌಕಿಕ ವಸ್ತುಗಳನ್ನು ಬಿಸುಟು ಮಾನವ ಸಂಬಂಧವನ್ನು ಉಳಿಸಿಕೊ!"

ಗಹನವಾದ ಈ ಅಮೂಲ್ಯ ಪಾಠವನ್ನು ನಾನು ಆಗ ಕಲಿತೆ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಇದನ್ನು ಪಾಲಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ.

ನನಗೆ ಇನ್ನೊಂದು ಸಂದರ್ಭ ನೆನಪಿಗೆ ಬರುತ್ತಿದೆ. ಇದರಿಂದ ನಾವು ಆಶ್ರಮವಾಸಿಗಳೆಲ್ಲರೂ ಅದ್ಭುತವಾದ ಪಾಠವನ್ನು ಕಲಿತೆವು. ಒಂದು ದಿನ ರಾತ್ರಿ ತರಗತಿಯಲ್ಲಿ ಆಶ್ರಮ ಜೀವನವನ್ನು ಕುರಿತು ಚರ್ಚೆ ಪ್ರಾರಂಭವಾಯಿತು. ಆಗ ಸ್ವಾಮೀಜಿ ನಮ್ಮ ಮುಂದೆ ಪ್ರಶ್ನೆಯೊಂದನ್ನು ಇಟ್ಟರು: "ನೂರು ಹಣ್ಣುಗಳಿಂದ ಫಲಭರಿತವಾದ ಒಂದು ಸೇಬಿನ ಮರವಿದೆ ಅಂತ ಇಟ್ಟುಕೊಳ್ಳೋಣ. ಅವುಗಳಲ್ಲಿ ನಾಲ್ಕು ಹಣ್ಣುಗಳು ಪಕ್ವವಾಗಿ ಹದವಾದ ಸ್ಥಿತಿಯಲ್ಲಿದೆ. ಉಳಿದ ತೊಂಬತ್ತಾರು ಹಣ್ಣುಗಳು ಕೊಳೆಯುವ ಅನೇಕ ಹಂತಗಳಲ್ಲಿವೆ. ಆ ಮರದ ಬಗ್ಗೆ ನಿಮ್ಮ ಅಭಿಪ್ರಾಯವೇನು?"

ನಾವೆಲ್ಲರೂ, "ಆ ಮರವನ್ನು ಕಡಿಯುವುದೇ ಸರಿ" ಎಂದು ಉತ್ತರಿಸಿದೆವು. ಸ್ವಾಮೀಜಿ ಆಗ ಹೇಳಿದರು: "ಇಲ್ಲ! ಅದು ನಾಲ್ಕು ಒಳ್ಳೆಯ ಹಣ್ಣುಗಳನ್ನು ಹೊಂದಿಲ್ಲವೇನು? ಆದ್ದರಿಂದ ಅದಕ್ಕೆ ಒಳ್ಳೆಯ ಹಣ್ಣುಗಳನ್ನು ನೀಡುವ ಸಾಮರ್ಥ್ಯವಿದೆ. ಹಣ್ಣುಗಳು ಕೊಳೆಯಲು ಕಾರಣವೇನು ಎಂದು ಹುಡುಕಿ ಪರಿಹಾರೋಪಾಯವನ್ನು ಕೈಕೊಂಡರೆ, ಒಳ್ಳೆಯ ಹಣ್ಣುಗಳ ಪ್ರಮಾಣ ಹೆಚ್ಚುವುದು."

ಈ ಅದ್ಭುತ ವಿವರಣೆಯನ್ನು ಕೇಳಿ ನಾವೆಲ್ಲ ಚಕಿತ ರಾದೆವು. ನಂತರ ನಾವೆಲ್ಲರೂ ನಮ್ಮ ಸಂಘದ ಬಗ್ಗೆ ಯೋಚಿಸಲು ತೊಡಗಿದೆವು. ನಾವೆಲ್ಲರೂ ಒಳ್ಳೆಯ ಸಂನ್ಯಾಸಿ ಗಳಾಗಲು ನಿಷ್ಕಪಟವಾಗಿ ಪ್ರಯತ್ನಿಸಿದರೆ, ಸಂಘವು ಹೇಗೆ ಅಭಿವೃದ್ಧಿಯಾಗುತ್ತದೆ ಎಂದು ಅರಿತೆವು.

ಆಗಿನ ಕಾಲದಲ್ಲಿ (೧೯೫೪ – ೧೯೫೬) ಜನರು ಆಶ್ರಮದ ಕಛೇರಿಯನ್ನು ಪ್ರವೇಶಿಸಲು ಯಾವ ನಿರ್ಬಂಧವೂ ಇರಲಿಲ್ಲ. ಇಂಥ ಗಡಿಬಿಡಿಯಲ್ಲಿ, ಒಮ್ಮೆ ನನ್ನ ಹಣದ ಪೆಟ್ಟಿಗೆಯಿಂದ ಕೊಂಚ ಹಣ ಕಳುವಾಯಿತು. ನಾನು ತುಂಬಾ ಭಯಗ್ರಸ್ತನಾಗಿ, ಹಣವನ್ನು ವಾಪಸ್ಸು ಪಡೆಯಲು ವಿಫಲನಾಗಿ, ನಮ್ಮ ಕಿಟ್ಟಿ ಮಾಸ್ತರರನ್ನು (ಅವರು ಆಗ ಕಾಲೇಜು ಉಪನ್ಯಾಸಕರಾಗಿದ್ದರು) ಕಳುವಾದ ಹಣವಾದ ಹದಿಮೂರು ರೂಪಾಯಿಗಳನ್ನು ಕೊಡಲು ಪ್ರಾರ್ಥಿಸಿದೆ. ಅವರು ತತ್‌ಕ್ಷಣ ಒಪ್ಪಿಕೊಂಡು ಹಣ ವನ್ನು ನೀಡಿದರು. ನನ್ನ ಲೆಕ್ಕ ಸರಿಹೋಯಿತು.

ಇದನ್ನು ಸ್ವಾಮೀಜಿಯವರಿಗೆ ತಿಳಿಸಿರಲಿಲ್ಲವಾದ್ದರಿಂದ, ಅದು ಮನಸ್ಸನ್ನು ಕುಟುಕುತ್ತಲೇ ಇತ್ತು. ನಾನು ವಿಷಯವನ್ನು ಅವರಿಗೆ ತಿಳಿಸಿದೆ. ಆಗ ಅವರು, "ಇನ್ನು ಮುಂದೆ ಅಲಕ್ಷ್ಯ ದಿಂದ ಇರಬೇಡ" ಎಂದಷ್ಟೇ ಹೇಳಿದರು.

ನನ್ನ ಅಧ್ಯಾತ್ಮ ಜೀವನದಲ್ಲಿ ಸಮಸ್ಯೆಗಳು ತೋರಿದಾಗ, ನಾನು ಸ್ವಾಮೀಜಿಯವರ ಸಲಹೆ ಕೇಳುತ್ತಿದ್ದೆ. ನನ್ನ ಸಮಸ್ಯೆಗೆ ಉತ್ತರ ನೀಡುವ ಮುನ್ನ, ಅವರ ಪಕ್ಕದಲ್ಲಿದ್ದ ಕುರ್ಚಿಯ ಮೇಲೆ ಕುಳಿತುಕೊಳ್ಳಲು ನನಗೆ ಆಗ್ರಹಿಸುತ್ತಿದ್ದರು. ನಂತರ ಅರ್ಧ ಧ್ಯಾನಾವಸ್ಥೆಯ ಭಾವಕ್ಕೆ ಏರಿ ನನ್ನ ಪ್ರಶ್ನೆಗಳಿಗೆ ಪರಿಹಾರ ಸೂಚಿಸುತ್ತಿದ್ದರು. ನನ್ನ ಮನಸ್ಸಿನ ಮೇಲೆ ಈ ಉತ್ತರಗಳು ಗಾಢಪ್ರಭಾವ ಬೀರುತ್ತಿದ್ದವು.

ಅವರು ಮಹಾಸಮಾಧಿಯಾಗುವ ಕೆಲವು ತಿಂಗಳುಗಳ ಮುಂಚೆ, ಅರ್ಧ ಧ್ಯಾನಾವಸ್ಥೆಯಲ್ಲಿ ಹೀಗೆ ಹೇಳಿದರು: "ಮಹಾ

ರಾಜರು (ಸ್ವಾಮಿ ಬ್ರಹ್ಮಾನಂದರು) ನನ್ನ ಎಲ್ಲ ಶಕ್ತಿಗಳನ್ನೂ ಹಿಂತೆಗೆದುಕೊಂಡಿದ್ದಾರೆ."

ಸ್ವಾಮಿ ಯತೀಶ್ವರಾನಂದಜಿ ಅವರಿಗೆ ಅನೇಕ ಯೋಗ ಶಕ್ತಿಗಳು ಸಿದ್ಧಿಸಿದ್ದವು. ಅವುಗಳನ್ನು ತಮ್ಮ ಶಿಷ್ಯರ ಒಳಿತಿಗಾಗಿ ಬಳಸುತ್ತಿದ್ದರೆಂದು, ಅವರ ಮಹಾಸಮಾಧಿಯ ನಂತರವಷ್ಟೇ ತಿಳಿದುಬಂದಿತು. ಯಾರ ಒಳಿತಿಗಾಗಿ ಅವರು ಈ ಶಕ್ತಿಗಳನ್ನು ಬಳಸುತ್ತಿದ್ದರೋ ಅಂಥವರಿಗೆ, ತಮ್ಮ ಅವಸಾನವಾಗುವವರೆಗೆ ಈ ವಿಷಯವನ್ನು ಯಾರಿಗೂ ತಿಳಿಸಬಾರದೆಂದು ಸ್ವಾಮೀಜಿ ಆಗ್ರಹಿಸುತ್ತಿದ್ದರು.

ಹೀಗಾಗಿ, ನಂತರ ನನಗೆ ಅತಿ ನಂಬಿಕಸ್ಥ ಮೂಲಗಳಿಂದ, ಅಂದರೆ, ಯಾರು ನೇರವಾಗಿ ಅವರಿಂದ ಈ ಕೃಪೆ ಪಡೆದಿದ್ದರೋ ಅವರಿಂದ, ಈ ವಿಷಯ ತಿಳಿದುಬಂದಿತು.

ಅಂತಹ ಕೆಲವು ವಿಶೇಷ ಸಂದರ್ಭಗಳನ್ನು ಇಲ್ಲಿ ಉಲ್ಲೇಖಿಸಬಹುದು: ಬಾಲ್ಯದಿಂದಲೇ ಅಪಸ್ಮಾರ ರೋಗದಿಂದ ಬಳಲುತ್ತಿದ್ದ ರೋಗಿಯನ್ನು ಗುಣಪಡಿಸಿದುದು; ಅಪಘಾತಕ್ಕೆ ಒಳಗಾಗಿ ಕೈ ಮುರಿದ ರೋಗಿಯ ಕೈಯನ್ನು ಸರಿಪಡಿಸಿದುದು; ಧೂಮಪಾನದ ಚಟವಿದ್ದ ಒಬ್ಬ ವ್ಯಕ್ತಿಯ ಎದೆಯ ಮೇಲೆಯೋ, ತಲೆಯ ಮೇಲೆಯೋ ಹಸ್ತವಿರಿಸಿ, ಅವನು ಆ ಚಟ ಬಿಡುವಂತೆ ಮಾಡಿದುದು; ಸ್ವಪ್ನದಲ್ಲಿ ಮಂತ್ರದೀಕ್ಷೆ ನೀಡಿದುದು (ನಂತರ ನಿಜಜೀವನದಲ್ಲಿ ಅದು ಸ್ಥಿರಪಟ್ಟಿತು); ಬೇರೊಂದು ಸ್ಥಳದಲ್ಲಿ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಭಕ್ತೆಯ ಮುಂದೆ ಸೂಕ್ಷ್ಮದೇಹಧಾರಿಯಾಗಿ ಪ್ರಕಟಗೊಂಡು ಶೀಘ್ರವೇ ಗುಣಮುಖಳಾಗುವಿಯೆಂದು ಆಶ್ವಾಸನೆ ನೀಡಿದುದು; ವಸ್ತುಗಳನ್ನು ಕಳೆದುಕೊಂಡ ವ್ಯಕ್ತಿಗಳಿಗೆ ಅವು ಎಲ್ಲಿರುವುದೆಂದು ಸೂಚಿಸಿದುದು; ಒಬ್ಬ ಪ್ರಾಮಾಣಿಕ ಸಾಧುವಿಗೆ ಮುಂಬರುವ ಅಪಾಯದ ಬಗ್ಗೆ ಎಚ್ಚರಿಕೆ ನೀಡಿದುದು; ರಾಮಕೃಷ್ಣ ಮಹಾ ಸಂಘವನ್ನು ಸೇರಲು ಉತ್ಸುಕನಾಗಿದ್ದ ಯುವಕನೊಬ್ಬನ ಬಗ್ಗೆ, 'ಅದು ಸಾಧ್ಯವಾಗುವುದಿಲ್ಲ' ಎಂದು ತಿಳಿಸಿದುದು ಇತ್ಯಾದಿ.

ಇವೆಲ್ಲವನ್ನೂ ಅಪನಂಬಿಕೆಯಿಂದ ನೋಡಲು ಯಾವ ಆಧಾರವೂ ಇಲ್ಲ. ಏಕೆಂದರೆ, ವೈಯಕ್ತಿಕವಾಗಿ ನನಗೆ ಅವರ ಎದುರಿನಲ್ಲಿಯೇ ಈ ಬಗೆಯ ಅತೀಂದ್ರಿಯ ಅನುಭವ ಉಂಟಾಯಿತು. ಒಂದು ಸಂದರ್ಭದಲ್ಲಿ ನಾನು ಅವರ ಬಳಿ ನಿಂತಿದ್ದೆ. ಸ್ಪರ್ಶಮಾಡುವಷ್ಟು ಹತ್ತಿರದಲ್ಲಿಯೇ ನಿಂತಿದ್ದೆ. ಆಗ ಸ್ವಾಮೀಜಿ ತಮ್ಮ ಕೈಯನ್ನು ಎತ್ತಿ ಹಿಡಿದು, ಕಣ್ಣು ಮುಚ್ಚಿಕೊಂಡರು. ಅದು ನನಗೆ ತಾಕಿತು. ತತ್‌ಕ್ಷಣವೇ ನನ್ನ ಬಾಹ್ಯಪ್ರಜ್ಞೆ ಹೋಯಿತು. ಆದರೆ, ಆಂತರ್ಯದಲ್ಲಿ ಪ್ರಕಾಶಮಾನವಾದ ಬೆಳಕಿನ ಅಲೆಗಳು ನನ್ನನ್ನು ಆವರಿಸುತ್ತಿದ್ದುದನ್ನು ನೋಡಿದೆ. ಅದ್ಭುತವಾದ ಆನಂದವನ್ನೂ, ಪರಿಪೂರ್ಣ ಶಾಂತಿಯನ್ನು ಆ ಸಮಯದಲ್ಲಿ ನಾನು ಅನುಭವಿಸಿದೆ.

ಅಂತಿಮವಾಗಿ ನಾನು ಹೇಳುವುದಿಷ್ಟೆ: ಈ ಲೋಕಕ್ಕೆ ಸಂಬಂಧಿಸಿರದ, ಆದರೂ ಇಲ್ಲಿಗೆ ಬಂದು ನಡೆದಾಡಿದ ಒಬ್ಬ ಶ್ರೇಷ್ಠವ್ಯಕ್ತಿಯೊಡನೆ ಒಡನಾಡಲು ಅವಕಾಶ ಸಿಕ್ಕಿದ ನಾನು ಬಹು ಅದೃಷ್ಟಶಾಲಿ. (*ಅನುವಾದ : ಎನ್. ಪ್ರಭಾಕರ*)

ಸುದ್ದಿ ಸಂಚಯ ಮಂಗಳೂರು ರಾಮಕೃಷ್ಣ ಮಠದಲ್ಲಿ 'ವಿವೇಕ ಸಂಸ್ಮರಣ'

ಮಂಗಳೂರಿನ ಶ್ರೀರಾಮಕೃಷ್ಣ ಮಠದಲ್ಲಿ, ೨೦೧೩, ಸೆಪ್ಟೆಂಬರ್ ೧೬ರಿಂದ ೨೧ರವರೆಗೆ ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿ ಉತ್ಸವದ ಪ್ರಯುಕ್ತ **'ವಿವೇಕ ಸಂಸ್ಮರಣ'** ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಶಿಷ್ಟವಾದ ಕಾರ್ಯಕ್ರಮಗಳ ಸರಣಿಯೊಂದು ಜರುಗಿತು. ಒಟ್ಟು ಆರು ದಿನಗಳ ಕಾಲ ಬೆಳಗ್ಗೆ ೯:೩೦ರಿಂದ ಸಂಜೆ ೪ ರವರೆಗೆ ಗೋಷ್ಠಿಗಳು ಜರುಗಿದವು. ೧೬ ರಿಂದ ಕ್ರಮವಾಗಿ ಸ್ನಾತಕೋತ್ತರ, ಪದವಿ ಹಾಗೂ ಪದವಿಪೂರ್ವ ವಿದ್ಯಾರ್ಥಿಗಳು, ಶಾಲಾ ಶಿಕ್ಷಕರು ಹಾಗೂ ಕಾಲೇಜಿನ ಉಪನ್ಯಾಸಕರಿಗಾಗಿ ಮೌಲ್ಯವರ್ಧಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸೆಪ್ಟೆಂಬರ್ ೧೬ ರಿಂದ ೨೧ರವರೆಗೆ ಉದ್ಘಾಟಕರಾಗಿ ಪ್ರತಿದಿನ ಕ್ರಮವಾಗಿ ಶ್ರೀ ಹೆಚ್. ಕೆ ಪಾಟೀಲ್, ಶ್ರೀ ವಿನಯ ಕುಮಾರ್ ಸೊರಕೆ, ಶ್ರೀಮತಿ ತುಳಸಿ ಮದ್ದಿನೇನಿ, ಕ್ಯಾಪ್ಟನ್ ಗಣೇಶ ಕಾರ್ಣಿಕ್, ಶ್ರೀ ಯು. ಟಿ. ಖಾದರ್ ಮತ್ತು ಶ್ರೀ ರಮಾನಾಥ ರೈ ಆಗಮಿಸಿದ್ದರು.

ಜಿಲ್ಲೆಯ ಹಲವಾರು ವರ್ಚಸ್ವಿ ವ್ಯಕ್ತಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಾಡಿನ ಪ್ರಮುಖರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ಸ್ಫೂರ್ತಿಯುತವಾದ ಉಪನ್ಯಾಸಗಳನ್ನು ನೀಡಿದರು. ಆರೂ ದಿನ ಸೇರಿ ಒಟ್ಟು ಸುಮಾರು ೨,೫೦೦ ವಿದ್ಯಾರ್ಥಿಗಳು ಹಾಗೂ ೧,೨೦೦ ಶಿಕ್ಷಕರು-ಅಧ್ಯಾಪಕರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು.